

# ಶಿವನಿಗೆ ಸಮರ್ಥ ಪ್ರತಿನಾಯಕ ದಕ್ಷ

**ಎಂ.ವಿ. ಕೀರ್ತಿ ಭಾನು**

ಸ್ಟಾರ್‌ಸುವರ್ಣದ 'ಹರಹರ ಮಹಾದೇವ'ದ ದಕ್ಷ

★ *ನಿಮ್ಮ ಕಲಾ ಬದುಕು ಹೇಗಿದೆ?*

ಮೂರನೇ ತರಗತಿ ಓದುವ ಹೊತ್ತಿಗೆ ಹವ್ಯಾಸಿ ರಂಗಭೂಮಿಯಲ್ಲಿ ನಟಿಸಲು ಆರಂಭಿಸಿದೆ. ಮೂವತ್ತು ವರ್ಷಗಳ ದೀರ್ಘ ಇತಿಹಾಸ ನನ್ನ ಕಲಾ ಜೀವನಕ್ಕಿದೆ. ವೃತ್ತಿಯಿಂದ ಉದ್ಯಮಿ, ಸಾಫ್ಟ್‌ವೇರ್ ಡೆವಲಪಿಂಗ್ ಕಂಪೆನಿಯನ್ನು ನಡೆಸುತ್ತಿದ್ದೇನೆ. ಆ ಕಾರಣಕ್ಕೆ ನಟನೆಯನ್ನು ವೃತ್ತಿಯಾಗಿ ತೆಗೆದುಕೊಳ್ಳಲಿಲ್ಲ. ತುಂಬಾ ಹಿಡಿಸುವ ಪಾತ್ರಗಳು ಏನಾದರೂ ಸಿಕ್ಕರೆ ನಟಿಸುತ್ತೇನೆ. ಕಿರುತೆರೆಗೆ ಒಂದು ವರ್ಷದ ಹಿಂದಷ್ಟೇ ಬಂದಿದ್ದೇನೆ.

★ *ಪೌರಾಣಿಕ ನಾಟಕದ ಸವಾಲುಗಳು ಹೇಗಿರುತ್ತವೆ?*

ನನ್ನ ಅಭಿಪ್ರಾಯವೇ ಸಾರ್ವತ್ರಿಕವಲ್ಲ. ನನಗೆ ಅನ್ನಿಸಿದ್ದು ಹೇಳುವುದಾದರೆ ಭಾಷಾ ಶುದ್ಧತೆ ಇರಬೇಕು. ಭಾಷೆ ಚೆನ್ನಾಗಿದ್ದರೆ ಒಂದು ಮೆಟ್ಟಿಲನ್ನು ಏರಿದಂತೆ ಆಗುತ್ತದೆ. ಇಲ್ಲದಿದ್ದರೆ ಅದೇ ಆರಂಭಿಕ ಅಡ್ಡಿಯಾಗುತ್ತದೆ. ರಂಗಭೂಮಿಯ ದೀರ್ಘ ಹಿನ್ನೆಲೆ ಇರುವುದರಿಂದ ಅದು ನನಗೆ ಅಷ್ಟು ಕಷ್ಟ ಅನ್ನಿಸಲಿಲ್ಲ. ಪೌರಾಣಿಕ ಪಾತ್ರವನ್ನು ನಿರ್ವಹಿಸುತ್ತಿರುವುದು ಇದೇ ಮೊದಲು. ಅದಕ್ಕಾಗಿ ಸ್ವಲ್ಪ ತಾಲೀಮು ಮಾಡಿದೆ. ಆಡು ಭಾಷೆ ಪೌರಾಣಿಕ ಚಿತ್ರಕ್ಕೆ ಸರಿಯಾಗುವುದಿಲ್ಲ. ಆಡು ಭಾಷೆ ಕಥೆಯಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಬದಲಿಸಿದರೂ ಸ್ಪಷ್ಟ ಅರ್ಥ ಹೊರಹೊಮ್ಮಿಸಬಹುದು. ಆದರೆ ಪೌರಾಣಿಕ ಕಥೆಯ ನಿರೂಪಣೆಯಲ್ಲಿ ಪದ ಜೋಡಣೆ ಅಲಂಕೃತ ಮುತ್ತಿನ ಹಾರದಂತಿರುತ್ತದೆ. ಒಂದು ಅತ್ತಿತ್ತ ಸರಿಸಿದರೂ ಅದರ ಸೌಂದರ್ಯ ಇಲ್ಲವಾಗುತ್ತದೆ. 'ಮಹಾದೇವಕ್ಕೆ' ಮುಂಚೆ ಅಭಯ ಸಿಂಹ ಸ್ಕ್ರಿಪ್ಟ್ ಬರೀತಾ ಇದ್ದರು. ಅವರಿಂದ ನಾನು ಸಿಕ್ಕಾಪಟ್ಟೆ ಕಲಿಯಲು ಸಾಧ್ಯವಾಯಿತು. ಅದು ನನಗೆ ತುಂಬಾನೇ ಖುಷಿ ಕೊಟ್ಟಿದೆ. ಪೌರಾಣಿಕ ಕಥೆಯಲ್ಲಿ ಸಾದಾಸೀದಾ ಇದ್ದರೆ ಸರಿ ಆಗುವುದಿಲ್ಲ. ಪಾತ್ರವೂ ಅದ್ದೂರಿ ಆಗಿರಬೇಕಾಗುತ್ತದೆ. ಭಾಷೆ– ಭಾವವೂ ಆರ್ಭಟದಿಂದ ಕೂಡಿರುತ್ತದೆ. ವೀಕ್ಷಕನೂ ಅದನ್ನೇ ಬಯಸುತ್ತಾನೆ.

★ *'ದಕ್ಷ' ಪಾತ್ರ ಹೇಗೆನಿಸುತ್ತದೆ?*

ಶಿವನನ್ನು ಎದುರಾಳಿ ಎನ್ನುವ ಕಾರಣಕ್ಕೆ ದಕ್ಷ ಖಳನಾಯಕ ಅಲ್ಲ. ಆದರೆ ಆ ರೀತಿ ನೋಡಲಾಗುತ್ತಿದೆ. ನೀತಿ– ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾನೆ. ಶಿವನ ಅಶಿಸ್ತು ದಕ್ಷನಿಗೆ ಇಷ್ಟ ಆಗುವುದಿಲ್ಲ. ತನ್ನ ತಂದೆ ಬ್ರಹ್ಮನ ತಲೆಯನ್ನು ಶಿವ ಕತ್ತರಿಸಿದ್ದೂ ಅಲ್ಲದೆ ಭೂ ಮಂಡಲದಲ್ಲಿ ಆತನ ಸ್ಮರಣೆ ಇಲ್ಲದಂತೆ ಮಾಡಿದ ಬಗ್ಗೆ ಕೋಪ ಇರುತ್ತದೆ. ದಕ್ಷನದು ಗೌರವಾನ್ವಿತ ವ್ಯಕ್ತಿತ್ವ. ತನ್ನ ಅರ್ಹತೆಯ ಬಲದ ಮೇಲೆಯೇ 'ಪ್ರಜಾಪತಿ' ಪಟ್ಟವನ್ನು ಗಿಟ್ಟಿಸುತ್ತಾನೆ. ಸಂಪ್ರದಾಯ, ನೀತಿ ನಿಯಮಗಳ ಪಾಲನೆಯಲ್ಲಿ ಬದ್ಧನಾಗಿರುವ ಸಕಾರಾತ್ಮಕ ಗುಣ ಅವನಲ್ಲಿದೆ. ನಿಜಕ್ಕೂ ಶಿವನಿಗೆ ಸರಿಸಮಾನವಾಗಿ ತೂಗುವ ಪ್ರತಿನಾಯಕ ದಕ್ಷ. ಅಂತಹ ಅದ್ಭುತ ಪಾತ್ರ ನಿರ್ವಹಿಸುತ್ತಿದ್ದೇನೆ ಅನ್ನಿಸುತ್ತಿದೆ.

★ *ಕಥೆಯ ಸತ್ಯಾಸತ್ಯದ ಬಗ್ಗೆ ಹೇಳುವುದಾದರೆ...*

ಯಾವುದೇ ಮತ– ಧರ್ಮಗಳು ಸೃಷ್ಟಿಯ ರಹಸ್ಯವನ್ನು ಹೇಳುವ ನಿಟ್ಟಿನಲ್ಲಿ ಪುರಾಣ ಪುಣ್ಯ ಕಥೆಗಳನ್ನು ರೂಪಿಸಿರುತ್ತವೆ. ಇಲ್ಲಿ ತುಂಬಾ ಸಂಗತಿಗಳು ವೈಜ್ಞಾನಿಕವಾಗಿ ವಿಶ್ಲೇಷಣೆ ಆಗಿವೆ. ಮೊದಲು ನನಗೂ ಈ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ. ನನಗೆ ಗೊತ್ತಿಲ್ಲ ಅಂದ ಮಾತ್ರಕ್ಕೆ ಅಲ್ಲಿ ಏನೂ ಇಲ್ಲ ಎಂದು ಅರ್ಥವಲ್ಲ. ಮೊದಲು ಏನು, ಎನ್ನುವುದು ಗೊತ್ತಾಗಬೇಕು. ಆಮೇಲೆ ಮುಂದಿನದ್ದು. ಇದೇ ಕಾರಣಕ್ಕೆ 'ನಂಬಿಕೆಯೆನ್ನುವುದು ಆಡುವ ಮಾತನಲ್ಲಿ ಇಲ್ಲ, ಕೇಳುವ ಕಿವಿಯಲ್ಲಿ ಇರುತ್ತದೆ.' ಎಂಬ ಮಾತಿದೆ. ನಂಬುವ ಕಿವಿ ವಿಶ್ವಾಸದಿಂದ ಇದ್ದರೆ ಸಾವಿರ ಸುಳ್ಳುಗಳನ್ನೂ ನಂಬುತ್ತದೆ. ಕಿವಿಯನ್ನು ನಂಬದೆ ಸತ್ಯ ನೋಡಿ ಅರಿಯಬೇಕು ಎನ್ನುವುದು ಗೊತ್ತಾಯಿತು.

★ *ನಿಮ್ಮಲ್ಲಿ ರಂಗಾಸಕ್ತಿ ಮೊಳಕೆಯೊಡೆದಿದ್ದು ಹೇಗೆ?*

ಅದಕ್ಕೆ ನನ್ನ ತಾಯಿ ಶ್ರೀಮತಿ ಕಾರಣ. ಪ್ರೌಢಶಾಲೆಯ ಪ್ರಾಂಶುಪಾಲೆಯಾಗಿ ನಿವೃತ್ತರಾಗಿದ್ದಾರೆ. ಅವರು ಗಾಯಕಿ. ನಾಟಕಗಳಲ್ಲಿಯೂ ಅಭಿನಯಿಸುತ್ತಿದ್ದರು. ನಾನು ಜಯನಗರದ ಎಂಇಎಸ್ ಶಾಲೆಯಲ್ಲಿ ಓದುವಾಗ ನಮ್ಮ ಇಂಗ್ಲಿಷ್ ಮೇಷ್ಟ್ರು ನಾಟಕವನ್ನು ಅನ್ಯ ಶಿಸ್ತಿನ ಪಠ್ಯ ಎನ್ನುವಂತೆಯೇ ಹೇಳಿಕೊಟ್ಟರು. ನಾಟಕ ಎನ್ನುವುದು ಸಮಯ ವ್ಯರ್ಥ ಮಾಡುವುದಿಲ್ಲ ಬದುಕು, ಕಲಿಸುವುದು ಎನ್ನುವುದನ್ನು ತೋರಿಸಿದರು. ಅವರ ಶಿಷ್ಯ ಬಳಗ 1988ರಲ್ಲಿ 'ಸಂಚಯ' ರಂಗ ತಂಡ ಕಟ್ಟಿತು. ಅಂದಿನಿಂದ ಆ ತಂಡದಲ್ಲಿ ಆಡುತ್ತಾ ಬಂದಿದ್ದೇನೆ. ನಮ್ಮ ತಂಡದ ಸುಮಾರು ನೂರಾರು ಸದಸ್ಯರು ಸಿನಿಮಾ– ಟಿವಿಯಲ್ಲಿ ನಟಿಸುತ್ತಿದ್ದಾರೆ.

■ **ರಾಘವೇಂದ್ರ**